O.S.15 /2023 PW-1

ದಿನಾಂಕಃ 25.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಗಂಡ ಮಡಕಶಿರ ತಾಲ್ಲೂಕಿನ ಹೇಮಾವತಿ ಊರಿನವರು ಎಂದರೆ ಸರಿ. ಸದರಿ ಊರಿನಲ್ಲಿ ಇರುವ ನನ್ನ ಗಂಡನ ಜಮೀನನ್ನು ಮಾರಾಟ ಮಾಡಿರುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂ 5, ಒಟ್ಟು ಎಷ್ಟು ಎಕರೆ ನನಗೆ ಗೊತ್ತಿಲ್ಲ. ಸರ್ವೆ ನಂ 5 ರಲ್ಲಿ ಎಷ್ಟು ಜನರಿಗೆ ಮಂಜೂರಾಗಿರುತ್ತದೆ ಎಂದು ನನಗೆ ಗೂತ್ತಿಲ್ಲ . ನನ್ನ ಗಂಡನಿಗೆ 2 ಎಕರೆ 15 ಗುಂಟೆ ಜಮೀನು ಮಂಜೂರು ಆಗಿರುತ್ತದೆ. ನನ್ನ ಗಂಡನನ್ನು ಹೊರತುಪಡಿಸಿ ನಾಲ್ಕು ಜನರಿಗೆ ಜಮೀನು ಮಂಜೂರಾಗಿರುತ್ತದೆ ಎಂದರೆ ಸರಿ. ನನ್ನ ಗಂಡನಿಗೆ ಮಂಜೂರಾಗಿರುವ ಜಮೀನಿನ ಬ್ಲಾಕ್ ಸಂಖ್ಯೆ ಗೊತ್ತಿಲ್ಲ. ಪ್ರತಿವಾದಿಯವರಿಗೆ ಮೇಲೆ ತಿಳಿಸಿದ ಸರ್ವೆನಂಬರಿನಲ್ಲಿ ಜಮೀನು ಮಂಜೂರಾಗಿದೆ ಎಂದರೆ ಸರಿ. ದಾವಾ ಸ್ವತ್ತಿನ ಚಕ್ಕು ಬಂದಿ ಪೂರ್ವಕ್ಕೆ ಓಬಳಮ್ಮ ಪಶ್ಚಿಮಕ್ಕೆ ಜಗನ್ನಾಥ ಉತ್ತರಕ್ಕೆ ದಾಸಪ್ಪ ಮತ್ತು ದಕ್ಷಿಣಕ್ಕೆ ನಾರಾಯಣಪ್ಪರವರ ಜಮೀನು. ನಮ್ಮ ಜಮೀನಿನ ದಕ್ಷಿಣ ದಿಕ್ಕಿಗೆ ಪ್ರತಿವಾದಿಯರ ಜಮೀನು ಎಂದರೆ ಸರಿ. ನನ್ನ ಗಂಡನಿಗೆ ಸದರಿ ಜಮೀನು ಮಂಜೂರಾಗುವ ಮೊದಲೇ ಪ್ರತಿವಾದಿಗೆ ದಿಃ15.11.1997 ರಲ್ಲಿ ಜಮೀನು ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯವರು ತಮ್ಮ ಜಮೀನಿನಲ್ಲಿ ಖಾತೆ ಪಹಣಿ ಬದಾಲಾವಣೆಮಾಡಿಕೊಂಡು ಸ್ವಾ ಧೀನದಲ್ಲಿದ್ದಾರೆ ಎಂದರೆ ಗೊತ್ತಿಲ್ಲ. ನಮ್ಮ ಮತ್ತು ಪ್ರತಿವಾದಿಯರ ಜಮೀನುಗಳ ಮಧ್ಯೆ ಸರ್ಕಾರಿ ರಸ್ತೆ ಇದೆ ಎಂದರೆ ಸರಿ. 2022 ರಲ್ಲಿ ಪ್ರತಿವಾದಿಯರು ಅವರ ಜಮೀನಿನಲ್ಲಿ ಬೋರ್ ವೆಲ್ ಕೊರೆಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ನಮ್ಮ ಜಮೀನಿನಲ್ಲಿ ಒಂದು ಬೋರ್ ವೆಲ್ ಇರುತ್ತದೆ. ನಮ್ಮ ವಿರುದ್ದ ಪ್ರತಿವಾದಿಯರು ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದರು ಎಂದರೆ ಸರಿ. ಪ್ರತಿವಾದಿರು ಸಣ್ಣಮಾರಪ್ಪರವರ ವಿರುದ್ದ ಓ ಎಸ್ 29/2001 ರಂತೆ ದಾವೆ ಊಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯು ಡಿಕ್ರಿ ಆಯಿತು ಎಂದರೆ ನನಗೆ ಗೊತ್ತಿಲ್ಲ. ಸೀತರಾಮಯ್ಯ , ಎನ್ ಆರ್ ಜಗನ್ನಾಥ ಮತ್ತು ನನ್ನ ಗಂಡ ಒಂದೇ ಕುಟುಂಬದವರು ಎಂದರೆ ಸರಿ. ಸೀತರಾಮಯ್ಯ ರವರಿಗೆ ಮೇಲೆ ತಿಳಿಸಿದ ಸರ್ವೆನಂಬರ್ ನಲ್ಲಿ ಬ್ಲಾಕ್ ನಂ 2 ಮತ್ತು ಎನ್ ಆರ್ ಜಗನ್ನಾಥ ರವರಿಗೆ ಬ್ಲಾಕ್ ನಂ 3

ಮಂಜೂರಾಗಿದೆ ಎಂದರ ಸರಿ. ನನ್ನ ಗಂಡನಿಗೆ ಬ್ಲಾಕ್ ನಂ 4 ಮಂಜೂರಾಗಿದೆ ಎಂದರೆ ಸರಿ. ನಾವು ನನ್ನ ಗಂಡ ಜೀವಂತ ಇದ್ದಾಗ ನಮ್ಮ ಜಮೀನನ್ನು ಸರ್ವೆ ಮಾಡಿಸಿರುತ್ತೇವೆ. ನಮ್ಮ ಹಾಗೂ ಪ್ರತಿವಾದಿಗಳ ಜಮೀನನ್ನು ಅಳತೆ ಮಾಡಿಸಲು ನಮ್ಮ ತಕರಾರು ಇಲ್ಲ ಎಂದರೆ ಸರಿ. ನಾವು ಸುಳ್ಳು ಚೆಕ್ಕುಬಂದಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ನೀಡಲು ಸದರಿ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಶಿರಾ.